ಕೃಷ್ಣಾ ಮೇಲ್ದಂಡೆ ಯೋಜನೆ

63 (956) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ) :– ಮಾನ್ಯ ಜಲ ಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕಳೆದ 3 ವರ್ಷಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು (ಯೋಜನೆವಾರು ವಿವರ ನೀಡುವುದು);

(ಅ) ಇದರಲ್ಲಿ ಪೂರ್ಣಗೊಂಡಿರುವ ಹಾಗೂ ಅಪೂರ್ಣಗೊಂಡ ಕಾಮಗಾರಿಗಳು ಎಷ್ಟು;

(ಇ) ಇನ್ನೂ ಎಷ್ಟು ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ ಬೊಮ್ಮಯಿ (ಮಾನ್ಯ ಜಲಸಂಪನ್ಮೂಲ ಸಚಿವರು):

(ಅ) ಕಳೆದ 3 ವರ್ಷಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 ಮತ್ತು 2 ರ ಅಡಿಯಲ್ಲಿ ವಿತರಣಾ/ಲ್ಯಾಟರಲ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ

1) ಆಲಮಟ್ಟಿ ಎಡದಂಡೆ ಕಾಲುವೆ ಅಡಿಯಲ್ಲಿ ಕಿ.ಮೀ. 72 ರಲ್ಲಿ ಬರುವ ಕಾಮಗಾರಿಗಳು,
2) ಇಂಡಿ ಏತ ನೀರಾವರಿ ಅಡಿಯಲ್ಲಿ ಬರುವ ವಿತರಣಾ ಕಾಲುವೆ ಸಂ.22ರ
. ಕಾಮಗಾರಿ
3) ಮುಳವಾಡ ಏತ ನೀರಾವರಿ ಯೋಜನೆಯ ಪೂರ್ವ ವಿತರಣಾ ಕಾಲುವೆ–6ರ ವಿಸ್ತರಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

ಮುಂದುವರೆದು, ಕೃಷ್ಣಾ ನ್ಯಾಯಾಧೀಕರಣದ ದಿನಾಂಕ: 30/12/2010ರ ಐತೀರ್ಪಿನಂತೆ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ರಡಿ 130.90 ಟಿಎಂಸಿ ನೀರನ್ನು ಬಳಸಬಹುದಾಗಿದ್ದು, ಈ ಕೆಳಕಂಡ ಯೋಜನಾ ಕಾಮಗಾರಿಗಳನ್ನು ಪೂರ್ವಭಾವಿಯಾಗಿ ಕೈಗೆತ್ತಿಕೊಳ್ಳಲಾಗಿರುತ್ತದೆ.

1. ಚಿಮ್ಮಲಗಿ ಏತ ನೀರಾವರಿ ಯೋಜನೆ ಮುಖ್ಯ ಸ್ಥಾವರ, 2.10 ಕಿಮೀ ಕಂಬೈನ್ಡ್ ಕಾಲುವೆ ಹಾಗೂ 20 ಕಿಮಿ ಪಶ್ಚಿಮ ಕಾಲುವೆ (ವಿತರಣಾ ಕಾಲುವೆ ಒಳಗೊಂಡಂತೆ)

2. ಇಂಡಿ ಏತ ನೀರಾವರಿ ಯೋಜನೆ (ಗುತ್ತಿ ಬಸವಣ್ಣ) ಕಿಮೀ 97.30 ರಿಂದ ಕಿಮಿ. 128 ರವರೆಗಿನ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆಗಳು.

3. ಮಲ್ಲಾಬಾದ್ ಏತ ನೀರಾವರಿ ಯೋಜನೆಯ ಬಳಬಟ್ಟಿ ಮೊದಲನೇ ಮುಖ್ಯ ಸ್ಥಾವರದ ಕಾಮಗಾರಿ.

4. ಮುಳವಾಡ ಏತ ನೀರಾವರಿ ಯೋಜನೆ ಹಂತ–3 ರಡಿ 2.27 ಲಕ್ಷ ಹೆ. ಅಚ್ಚುಕಟ್ಟು ಕ್ಷೇತ್ರದ ಟೋಪೊಗ್ರಾಪಿಕಲ್ ಸರ್ವೆ ಪೂರ್ಣಗೊಂಡಿರುವುದು.

ಈ ಮೇಲ್ಕಂಡ ಉಪ ಯೋಜನೆಗಳಲ್ಲದೆ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸೇರದೆ ಇರುವ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆರೆಗಳಿಗೆ, ಬಾಂದಾರಗಳಿಗೆ ನೀರು ತುಂಬಿಸಲು ಒಂದು ವಿಶೇಷ ಕಾರ್ಯಕ್ರಮದಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ.

(ಆ) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 ಮತ್ತು 2 ರ ರಡಿಯಲ್ಲಿ ಬರುವ ಇಂಡಿ ಏತ ನೀರಾವರಿ ಯೋಜನೆಯಲ್ಲಿನ ವಿತರಣಾ ಕಾಲುವೆ ಸಂ.22ರ ಬಾಕಿ ಕಾಮಗಾರಿ ಪೂರ್ಣಗೊಂಡಿದೆ ಹಾಗೂ

1) ಆಲಮಟ್ಟಿ ಎಡದಂಡೆ ಕಾಲುವೆ ಅಡಿಯಲ್ಲಿ ಬರುವ ಕಿ.ಮೀ. 72 ರಡಿ ಬರುವ ಕಾಮಗಾರಿ ಮತ್ತು

2) ಮುಳವಾಡ ಏತ ನೀರಾವರಿ ಯೋಜನೆಯ ಪೂರ್ವ ವಿತರಣಾ ಕಾಲುವೆ–6ರ ವಿಸ್ತರಣೆ ಕಾಮಗಾರಿಗಳು ಅಪೂರ್ಣಗೊಂಡಿರುತ್ತವೆ.

(ಇ) 2011–12ನೇ ಸಾಲಿನಲ್ಲಿ ನಿಗಮದಡಿ ಕೈಗೊಳ್ಳಲು ಉದ್ದೇಶಿಸಿರುವ ಎಲ್ಲಾ ಕಾಮಗಾರಿಗಳಿಗೆ ವಾರ್ಷಿಕ ಕಾರ್ಯಕ್ರಮ ಪಟ್ಟಿಯಲ್ಲಿ ಅನುದಾನ ಒದಗಿಸಲಾಗಿದ್ದು, ಕಾಮಗಾರಿಯ ಪ್ರಗತಿಗೆ ಅನುಗುಣವಾಗಿ ನಿಗಮದಿಂದ ಹಣ ಬಿಡುಗಡೆ ಮಾಡಲಾಗುತ್ತಿದೆ. ಸರ್ಕಾರದಿಂದ ನಿಗಮದ ಬೇಡಿಕೆಗೆ ಅನುಗುಣವಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ.

ಅಧ್ಯಕ್ಷರು: ನಿಯಮ 69ರಲ್ಲಿ ಈ ವಿಷಯ ವಿದೆಯಲ್ಲ. ಆಗ ಎಲ್ಲವನ್ನೂ ಹೇಳುತ್ತಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಉತ್ತರವನ್ನು ನಾನು ಈಗಾಗಲೇ ಲಿಖಿತ ಮೂಲಕವಾಗಿ ಅವರಿಗೆ ಒದಗಿಸಿದ್ದೇನೆ. ಇಲ್ಲಿರುವಂಥ ಪ್ರಶ್ನೆಗೆ ಇನ್ನಷ್ಟು ವಿವರವಾಗಿ ನಿಯಮ 69ರಲ್ಲಿ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು: ಆಗಬಹುದು.